ಸಾಕಿದ ಮಗ ಸಮಾಜಘಾತುಕ ಕೆಲಸ ಮಾಡಿದನಲ್ಲ ಎಂಬ ಸಂಕಟವೇ ನನ್ಗೆ ಹೆಚ್ಚಾಗಿ ಹೋಯಿತು. ಇರಲಿ.. ನಡೆದುದ್ದೆಲ್ಲ ಒಂದು ಕೆಟ್ಟ ಘಳಿಗೆ ಅಂದುಕೊಳ್ಳೋಣ.. ಸೂರ್ಯ ಹೊಸ ಮನುಷ್ಯನಾಗಿ ಬದುಕಲು ಒಂದು ಅವಕಾಶ ನಾವೆಲ್ಲ ನೀಡಲೇಬೇಕು ಇವತ್ತು.. ಮನಸ್ಪೂರ್ವಕವಾಗಿ ಅವ್ನನ್ನ ಸ್ವೀಕರಿಸ್ತೀನಿ' ಎಂದು ದೂರದಲ್ಲಿ ನಿಂತು ಆಗಲೇ ಅವರ ಮಾತುಗಳಿಂದ ಕಣ್ಣೀರಾಗಿದ್ದ ಸೂರ್ಯನನ್ನು ತೆರೆದ ಬಾಹುಗಳಿಂದ ಸ್ವಾಗತಿಸಿದರು.

ಆ ಒಂದು ಪ್ರೀತಿಯ ಆಹ್ವಾನಕ್ಕೆ, ಬರಡು ಭೂಮಿ ನೀರ ಹನಿಗೆ ಕಾತರಿಸುವಂತೆ ಕಾತರಿಸುತ್ತಿದ್ದ ಸೂರ್ಯ ಧಾವಿಸಿ ಹೋಗಿ ಅವರ ತೆಕ್ಕೆಗೆ ಬಿದ್ದ. ಆ ಅಪೂರ್ವ ಅಮೃತ ಘಳಿಗೆ ವಿಜಯಮ್ಮ ಮತ್ತು ಅಪೂರ್ವ ಕೂಡಾ ಸಂತಸದ ಕಂಬನಿ ಸುರಿಸಿದರು.

'ನನ್ನ ತಪ್ಪು ಕ್ಷಮಿಸು ಸೂರ್ಯ.. ನಿನ್ನನ್ನು ತುಂಬಾ ಗೋಳಾಡಿಸಿ ಬಿಟ್ಟೆ' ರಾಯರು ಗದ್ಗದಿತರಾದರು.

'ನನ್ನನ್ನು ಕ್ಷಮಿಸಿ ಬಿಡಿ ಅಪ್ಪಾಜಿ.. ನಿಮ್ಮ ಮನಸ್ಸು ನೋಯಿಸುವಂಥ ಕೆಲಸ ನಾನು ಯಾವತ್ತು ಮಾಡಲ್ಲ.. ಆದ್ರೆ ನನ್ನ ದೂರ ಮಾತ್ರ ಮಾಡ್ಬೇಡಿ.. ನಿಮ್ಮಿಂದ ದೂರವಾಗಿ ನಾನು ಇರಲಾರೆ'.

'ಇವತ್ತಿಗೆ ಈ ಮನೆ ನಂದನವಾಯ್ತು ನೋಡಿ. ಇದಕ್ಕೆಲ್ಲ ಕಾರಣ ಈ ಅಪೂರ್ವ. ನಿನ್ನ ಉಪಕಾರ ಯಾವತ್ತೂ ಮರೆಯೋದಿಲ್ಲ ಕಂದ. ಈ ಮನೆ ಮಗನನ್ನು ಮರಳಿಸಿ ಕೊಟ್ಟೆ ನೀನು. ಇವತ್ತು ನೀನು ಮಾಡಿದ ಉಪಕಾರಕ್ಕೆ ನಾನೇನು ಕೊಡಲಿ ನಿನ್ಗೆ ಹೇಳು?' ಅಪೂರ್ವಳ ಕೈ ಹಿಡಿದು ವಿಜಯಮ್ಮ ಧನ್ಯತೆಯಿಂದ ಕೇಳಿದರು.

'ನಂಗೇನೂ ಬೇಡ ಆಂಟಿ.. ನೀವೆಲ್ಲರೂ ಪ್ರೀತಿಯಿಂದ ಒಂದಾಗಿ ಬಾಳೋದನ್ನು ನೋಡೋದೇ ಚೆಂದ ..ನನ್ಗೆ ಅನ್ನ ಹಾಕಿ, ಫೀಸು ಕಟ್ಟಿ ಓದಿಸಿದ್ದೀರ.. ಆ ಋಣ ನಾನು ತೀರಿಸಲು ಸಾಧ್ಯನಾ ಹೇಳಿ..?'

'ಅದೇನೂ ದೊಡ್ಡದಲ್ಲ ಮಗೂ.. ಹಾಗೆಲ್ಲ ಅಂದುಕೊಳ್ಳಬೇಡ ನೀನು.. ನೀನ್ಯಾವತ್ತೂ ಈ ಮನೆಗೆ ಬೇರೆಯವಳಲ್ಲ.. ಋಣ ಗಿಣ ಅಂತೆಲ್ಲ ಮಾತನಾಡಬಾರದು ನೀನು..' ವಿಜಯಮ್ಮ ಪ್ರೀತಿಯಿಂದ ಗದರಿದರು.

'ಬದುಕು ಇರೋದು ನಾಲ್ಕು ದಿನ.. ಇವತ್ತಿರ್ತೀವಿ.. ನಾಳೆ ಹೋಗ್ತೀವಿ. ಇದ್ದಾಗ ಕೋಪ, ರೋಷ, ದ್ವೇಷ ಸಾಧಿಸಿ ಏನಾಗಬೇಕಿದೆ..? ಇರುವವರೆಗೂ ಪ್ರೀತಿ ಸಾಮರಸ್ಯದಿಂದ ಇರೋಣ' ರಾಯರು ಜ್ಞಾನೋದಯವಾದಂತೆ ಮಾತನಾಡಿದರು. ಅವರ ಅನಾರೋಗ್ಯ, ಅವರನ್ನು ತೀರಾ ವಿಚಲಿತಗೊಳಿಸಿದೆ ಎಂದು ಅಪೂರ್ವಗಳಿಗೆ ಅರಿವಾಯಿತು. ಅಂತೂ ಮನೆಯವರೆಲ್ಲಾ ಒಂದಾಗಿದ್ದು ಅವಳಿಗೂ ಮನಸ್ಸಿಗೆ ಹಿತವನ್ನುಂಟು ಮಾಡಿತ್ತು.

## ವಿಜಯಮ್ಮನ ಸಂಭ್ರಮ

'ಇವತ್ತು ಸಿಹಿ ಮಾಡ್ತೀನಿ' ವಿಜಯಮ್ಮ ಸಂಭ್ರಮದಿಂದ ಅಡುಗೆ ಕೋಣೆಗೆ ನಡೆದರೆ, ಅಪೂರ್ವ ತನ್ನ ಕೋಣೆಯತ್ತ ಹೆಜ್ಜೆ ಹಾಕಿದಳು. ಪಠ್ಯಪುಸ್ತಕ ಹಿಡಿದು ಕುಳಿತರೂ ಅವಳಿಗೂ ಒಂದು ಪುಟ ಓದಲಾಗಲಿಲ್ಲ. ರಾಯರು, ಮಗನನ್ನು ಸ್ವೀಕರಿಸಿದ್ದು ಅವಳಿಗೂ ಮನಸ್ಸಿಗೆ ದೊಡ್ಡ ಆನಂದವನ್ನುಂಟು ಮಾಡಿತ್ತು. ಆ ಲಹರಿಯನ್ನು ಆಸ್ವಾದಿಸುವಾಗಲೇ ಸೂರ್ಯ ಕೋಣೆಯ ಬಾಗಿಲಿಗೆ ಬಂದು ನಿಂತಿದ್ದ.

'ಅಪೂರ್ವ.. ನಾನು.. ಒಳಗಡೆ ಬರಬಹುದಾ..?' ಅವನ ಧ್ವನಿ ಮೃದುವಾಗಿತ್ತು. ಅವಳು ಧಡಕ್ಕನೇ ಎದ್ದು ನಿಂತಳು.

'ಬನ್ನಿ'

ಅವನು ಅವಳನ್ನು ಸಮೀಪಿಸಿ ಅನತಿ ದೂರದಲ್ಲಿ ನಿಂತ. 'ನಿಮ್ಗೆ ಹೇಗೆ ಥ್ಯಾಂಕ್ಸ್ ಹೇಳಬೇಕೋ ಗೊತ್ತಿಲ್ಲ.. ನಾನು ನಿನ್ನ ಹತ್ರ ತುಂಬಾ ಕೆಟ್ಟದಾಗಿ ವರ್ತಿಸಿದ್ದೀನಿ.. ಕೈ ಮಾಡಿದ್ದೀನಿ.. ಕುತ್ತಿಗೆ ಹಿಚುಕಿದ್ದೀನಿ.. ಕೂಡಿ ಹಾಕಿ ಹೋಗಿದ್ದೀನಿ.. ಮೃಗನ ಥರ ನಿಮ್ಹತ್ರ ವರ್ತಿಸಿದರೂ ನೀವು ನನ್ನ ಬಗ್ಗೆ ಇಷ್ಟು ಕಾಳಜಿ ತೋರಿಸಿದ್ದೀರಿ.. ನೆರೆಹೊರೆಯರೆಲ್ಲ.. ನನ್ನನ್ನು ಈ ಮನೆಯಿಂದ ಓಡಿಸಲು ಬಂದಾಗ, ನೀವು ಮಾತನಾಡಿದ ರೀತಿಗೆ ಅವ್ರೆಲ್ಲಾ ಸೋಲ ಬೇಕಾಯಿತು. ನನ್ನನ್ನು ಅಪ್ಪ ಹೊರಗಡೆ ಹಾಕಿದ್ರೆ.. ಮತ್ತೆ ನನ್ಗೆ ಆ ಲಕ್ಷ್ಮೀ ನರಸಿಂಹ ದೇವಸ್ಥಾನದ ಮೆಟ್ಟಿಲುಗಳೇ ಗತಿ ಆಗಿತ್ತು.. ನಾನು ನಿಜವಾಗಲೂ ಬದಲಾಗಬೇಕು ಅಂತ ಬಯಸ್ತೀನಿ. ನಾನು ನಿಮ್ಮೆಲ್ಲರ ಥರ ಸಹಜವಾಗಿರ ಬೇಕು ಅಂತ ಆಸೆ ಪಡ್ತೀನಿ. ಅಪ್ಪಾಜಿ ನನ್ನನ್ನು ಸ್ವೀಕರಿಸಿದ್ದು ನನ್ಗೆ ಜೀವನದಲ್ಲಿ ದೊಡ್ಡ ನಿಧಿ ಸಿಕ್ಕಂತಾಗಿದೆ. ಅದಕ್ಕೆ ಕಾರಣ ನೀನು ಅಪೂರ್ವ. ನೀನು ನನ್ಗೆ ಮಾಡಿದ ಉಪಕಾರ ಜೀವನ ಪೂರ್ತಿ ಮರೆಯಲ್ಲ..ನಾನು ನಿನ್ನನ್ನು ದ್ವೇಷಿಸಿದರೂ ನನ್ನನ್ನು ನೀನು ಇಷ್ಟೊಂದು ಅರ್ಥ ಮಾಡಿಕೊಳ್ಳಲು ಹೇಗೆ ಸಾಧ್ಯ?'

'ಅರ್ಥ ಮಾಡಿಕೊಳ್ಳಲು ಹತ್ತಿರವಿರಬೇಕೆಂದಿಲ್ಲ ಸೂರ್ಯ.. ಹೃದಯ, ಕಣ್ಣು ಇದೆಯಲ್ವಾ. ಅದು ಸಾಕು. ಆ ದಿನ ನೀವು ಹಣ ತೆಗೆದುಕೊಂಡು ಹೋಗುವಾಗ ನಿಮ್ಮನ್ನು ತಡೆಯುವ ಯತ್ನ ಮಾಡಿದ್ದೆ. ಆಗ ನೀವು ಸ್ಪಷ್ಟವಾಗಿ ನಿಮ್ಮ ವೇದನೆ ವ್ಯಕ್ತಪಡಿಸಿದ್ರಿ. ನಿಮ್ಮ ನೋವು ಏನೂಂತ ನನ್ಗೆ ಅರ್ಥವಾಗಿತ್ತು. ನೀವು ಹೆತ್ತವರ ಪ್ರೀತಿಗೆ ಕಾತರಿಸ್ತಿದ್ರಿ ಎನ್ನುವುದು ಪ್ರತಿ ವರ್ತನೆಯಲ್ಲಿ ವ್ಯಕ್ತವಾಗುತ್ತಿತ್ತು. ನಾನಂತೂ ನೀವು ಹೇಳಿದಂತೆ ಅನಾಥೆ. ಅಪ್ಪ ಅಮ್ಮ ಬದುಕಿಲ್ಲ. ಚಿಕ್ಕಮ್ಮನ ಮನೆಯಲ್ಲಿ ಅವರ ಆಸರೆಯಲ್ಲಿ ಬೆಳೆದೆ. ಈಗ ಇನ್ಯಾರದ್ದೋ ಆಸರೆಯಲ್ಲಿದ್ದು ಓದ್ಕೋತಿದ್ದೀನಿ..ಅವ್ರನ್ನ ಕಳ್ಕೊಂಡ ನನಗೆ ಅವ್ರ ಬೆಲೆ ಏನೂಂತ ಚೆನ್ನಾಗಿ ಗೊತ್ತು.. ಆದ್ರೆ ನಿಮ್ಗೆ ಹೆತ್ತವರಿದ್ದೂ ಅವ್ರ ಪ್ರೀತಿ ವಾತ್ಸಲ್ಯದಿಂದ ವಂಚಿತರಾಗಿದ್ರಿ.. ಆ ಕಳೆದುಕೊಂಡ ಪ್ರೀತಿ ನಿಮ್ಗೆ ಸಿಗ್ಬೇಕು ಅಂತ ನನಗನ್ನಿಸಿತು. ಅದನ್ನೇ ಹೇಳಿದೆ ಅಷ್ಟೇ'.

ಅವಳ ಮಾತುಗಳಿಂದ ಅವನು ಕೃತಜ್ಞತೆಯಿಂದ, 'ನಿನ್ನ ಮಾತುಗಳಿಂದ ಎಲ್ಲರ ಮನಸ್ಸು ಪರಿವರ್ತನೆಯಾಯಿತು.. ನನ್ಗೆ ಇವತ್ತು ತುಂಬಾ ಸಂತೋಷದ ದಿನ'. ಅವನ ಮುಖದಲ್ಲಿ ಎಂದೂ ಇಲ್ಲದ ಹೊಸ ಕಾಂತಿ ಮೂಡಿತ್ತು. ಅವನ ಹೃದಯದ ಹಿಗ್ಗು ಮುಖದಲ್ಲಿ ಪುಟಿದೇಳುತ್ತಿತ್ತು.

'ಅಪೂರ್ವ' ಅವಳನ್ನೇ ನಿರುಕಿಸುತ್ತ ನುಡಿದ. ಅವಳು ಕಣ್ಣೆತ್ತಿ ಅವನೆಡೆಗೆ ದಿಟ್ಟಿಸಿದಳು. ಇಬ್ಬರ ಕಂಗಳು ಒಂದು ಕ್ಷಣ ಬೆರೆತವು.

'ನಿನ್ನ ಬಗ್ಗೆ ನನ್ಗೆ ತುಂಬಾ ಅಭಿಮಾನ ಮೂಡಿದೆ ಅಪೂರ್ವ. ನನ್ನ ಹಿಂದಿನ ಎಲ್ಲಾ ಕೆಟ್ಟ ವರ್ತನೆಗಳಿಗೆ ನಾನು ನಿನ್ನ ಬಳಿ ಕ್ಷಮೆ ಕೇಳ್ತೀನಿ. ಎಲ್ಲಾ ಹಿಂದಿನ ಕಹಿ ಘಟನೆ ಮರೆತು ನಾವು ಸ್ನೇಹದಿಂದ ಇರೋಣ' ಅವನು ಸಲುಗೆಯಿಂದ ನುಡಿದಾಗ ಅವನ ಆತ್ಮೀಯತೆಗೆ ಅವಳು ಸೋಲಲೇಬೇಕಾಯಿತು.

'ನಿಮ್ಮ ಬದಲಾವಣೆ ನಿಮಗಿಂತಲೂ ಹೆಚ್ಚಿನ ಖುಷಿ ನನಗೆ ತಂದಿದೆ. ಎಲ್ರೂ ಒಂದಾಗಿ ಎಲ್ಲಾ ಕಹಿ ಮರೆತು ಬಾಳುವುದಕ್ಕಿಂತ ಜೀವನದಲ್ಲಿ ಇನ್ನೊಂದು ಖುಷಿ ಇದೆಯೇ ಹೇಳಿ? ನಾವೆಲ್ಲ ನಿಮ್ಮ ಮೇಲಿಟ್ಟಿರುವ ನಂಬಿಕೆಗೆ ಚ್ಯುತಿ ಬರದಂತೆ ನೀವು ನಡೆದುಕೊಳ್ಳಬೇಕು. ನಿಮ್ತಂದೆ ನಿಮ್ಮ ಮೇಲಿಟ್ಟಿರುವ ಭರವಸೆ ಉಳಿಸಿಕೊಳ್ಳಬೇಕು.. ಆ ರೌಡಿ ಗೋಪಿಯಂಥವರ ಸಹವಾಸ ಬಿಟ್ಟು, ನೀವು ನಿಮ್ಮದೇ ಆದ ಹೊಸ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು. ಎಲ್ಲರೂ ಬೆರಗಾಗುವ ರೀತಿಯಲ್ಲಿ ನೀವು ಬೆಳೆಯಬೇಕು. ಅದೇ ನಮ್ಮೆಲ್ಲರ ಆಸೆ'. ಅವಳ ಮಾತುಗಳಿಗೆ ಸೂರ್ಯ ಪೂರ್ತಿಯಾಗಿ ಕರಗಿ ಹೋದ.

'ನನ್ನ ಬಗ್ಗೆ ನೀನು ಇಷ್ಟೆಲ್ಲಾ ಯೋಚಿಸ್ತೀಯಲ್ಲಾ ಅಪೂರ್ವ. ನನ್ಗೆ ಏನು ಹೇಳಬೇಕೆಂದೇ ತೋಚ್ತಾ ಇಲ್ಲ.'

'ನಿಮ್ಗೆ ನನ್ನಿಂದ ಏನೇ ಸಹಕಾರ ಬೇಕಾದ್ರೂ ಸಂಕೋಚ ಪಡದೇ ಕೇಳಿ' ಅಪೂರ್ವ ನುಡಿದಾಗ ಅವನು ಮಾತೇ ಬಾರದವನಂತೆ ನಿಂತು ಬಿಟ್ಟ.

ತಾನು ಅವಳೊಂದಿಗೆ ಎಷ್ಟೊಂದು ಹೀನಾಯವಾಗಿ ನಡೆದುಕೊಂಡಿದ್ದೆ. ಮಗನಾಗಿ ತಾನಿದ್ದೂ ತನ್ನನ್ನು ದೂರ ಮಾಡಿ ಇವಳನ್ನು ಮನೆಯಲ್ಲಿರಿಸಿ ಅವಳನ್ನು ಮಗಳಂತೆ ಕಾಣುವ ತನ್ನ ಹೆತ್ತವರಿಗಿಂತಲೂ, ತನಗೆ ದೊರಕದಿದ್ದ ಅಕ್ಕರೆ, ಪ್ರೀತಿ ಇವಳು ಗಳಿಸಿಕೊಂಡಿದ್ದಾಳೆಂಬ ಅಸೂಯೆ ಅವಳ ಮೇಲೆ ದ್ವೇಷ ಕಾರುವಂತೆ ಮಾಡಿತ್ತು. ತನ್ನ ಮನೆಯಲ್ಲಿ ಅವಳು ಅಗತ್ಯಕ್ಕಿಂತಲೂ ಹೆಚ್ಚಿನ ಸ್ವಾತಂತ್ರ್ಯ ವಹಿಸಿ ತನ್ನ ಮೇಲೇ ಸವಾರಿ ಮಾಡಲು ಬಂದಿದ್ದನ್ನು ತನಗೆ ಅರಗಿಸಿಕೊಳ್ಳಲಾಗಿರಲ್ಲಿಲ್ಲ. ತನ್ನ ಪ್ರತಿ ಹೆಜ್ಜೆಗೆ ಅವಳು ಅಡ್ಡಿಪಡಿಸುತ್ತಿದ್ದಾಳೆ ಎಂಬ ಸಿಟ್ಟು ಪ್ರತಿ ಸಂದರ್ಭದಲ್ಲೂ ಮೂಡಿತ್ತು. ಆದರೆ ಆದದ್ದೇನು, ಇಂದು ಅವಳು ತನ್ನ ಪರ ವಹಿಸಿ ಮಾತನಾಡದಿದ್ದರೆ, ತನ್ನನ್ನು ಸಮರ್ಥಿಸಿ ಕೊಳ್ಳದಿದ್ದರೆ, ನನ್ನ ಬಗ್ಗೆ ದೃಢ ನಿಲುವು ತಳೆದು ತನಗೆ ಬೆಂಬಲಿಸದಿದ್ದರೆ ಇಂದು ಮತ್ತೆ ಈ ಮನೆಯವರ ಸಾಂಗತ್ಯ, ಈ ಪ್ರೀತಿ ದೊರಕುತ್ತಲೇ ಇರಲಿಲ್ಲ. ಅವಳು ತಿಳಿಸಿದಂತೆ ಪ್ರಾಯಶ್ಚಿತ್ತ ಪಟ್ಟಿದ್ದೆ.. ಹೆಜ್ಜೆ ಹೆಜ್ಜೆಗೆ ಹೃದಯದ ಮೇಲೆ ನೋವಿನ ಬರೆ ಬೀಳುತ್ತಲೇ ಇತ್ತು. ಜೈಲಿನ ಕಂಬಳಿಗಳಾಚೆಯ ಹಾದಿಯುದ್ದಕ್ಕೂ ನನ್ನವರಿಗಾಗಿ ಕಣ್ಣು ಕಾತರದಿಂದ ಹಾಯಿಸಿದರೂ, ನನ್ನವರ ಮುಖ ಕಾಣದಾಗ ಎದೆ ಪಶ್ಚಾತ್ತಾಪದ ಬೇಗೆಯಲ್ಲಿ ಬೇಯುತ್ತಿತ್ತು. ತಾನು ತಿರಸ್ಕೃತ, ಬೇಡವಾದವನೆಂಬ ಭಾವವೇ ಕುಲುಮೆಯ ಕೆಂಡದಂತೆ ನನ್ನೊಳಗೆ ಸುಡುತ್ತಿತ್ತು. ಜೀವನದ ಅತೀ ಕಷ್ಟದ